ಅ) ಹಾಗಿದ್ದಲ್ಲಿ ಬೆಂಗಳೂರಿಗೆ ಸಮೀಪದಲ್ಲಿರುವ ದೊಡ್ಡ ಆಲದ ಮರ, ಕಣ್ವಾ ಜಲಾಶಯ, ಬನ್ನೇರುಘಟ್ಟ, ನಂದಿಬೆಟ್ಟ, ಮುಂತಾದ ಪ್ರವಾಸಿ ಸ್ಥಳಗಳನ್ನು ಈ ಕಾರ್ಯಕ್ರಮದಲ್ಲಿ ಅಭಿವೃದ್ಧಿ ಪಡಿಸಲಾಗುವುದೇ?

ಶ್ರೀ ಜಿ.ಹೆಚ್. ಪಟೇಲ್ (ಉಪ ಮುಖ್ಯಮಂತ್ರಿಗಳು) :

ಅ) ಪ್ರವಾಸೀ ಸ್ಥಳಗಳನ್ನು ಅಭಿವೃದ್ಧಿಪಡಿಸವ ಕಾರ್ಯಗಳು ಪ್ರವಾಸೋದ್ಯಮ ನಿರ್ದೇಶಕರ ಅಧಿಕಾರ ವ್ಯಾಪ್ತಿಯಲ್ಲಿ ಬರುತ್ತವೆ. ಆದರೂ ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮವು ತನ್ನ ರಜತ ಮಹೋತ್ಸವ ವರ್ಷದಲ್ಲಿ ಈಗಿರುವ ಅನೇಕ ಸೌಲಭ್ಯಗಳನ್ನು ಹೆಚ್ಚಿಸುವುದರ ಜೊತೆಗೆ ಅನೇಕ ಸ್ಥಳಗಳಲ್ಲಿ ಎಸ್‌ಟಿಡಿ, ಐಎಸ್‌ಡಿ ಸೌಲಭ್ಯಗಳನ್ನು ಮತ್ತು ಇಂಟರ್‌ಕಾಮ್ ಸೌಲಭ್ಯಗಳನ್ನು, ಹವಾನಿಯಂತ್ರಿತ ಸೌಲಭ್ಯಗಳನ್ನು ಟಿವಿಗಳನ್ನು ಹಂತ ಹಂತವಾಗಿ ಒದಗಿಸುವ ಯೋಜನೆಗಳನ್ನು, ಮಕ್ಕಳಿಗೆ ಮನರಂಜನಾ ಕ್ರೀಡೆಗಳಿಗೆ ಅವಕಾಶ ಮಾಡಿಕೊಡುವ ವಸ್ತುಗಳನ್ನು ಮತ್ತು ಹಳೆಯ ಕಟ್ಟಡಗಳನ್ನು ರಿಪೇರಿ ಮಾಡುವುದು ಮುಂತಾದ ಯೋಜನೆಗಳನ್ನು ಹಾಕಿ ಕೊಳ್ಳಲಾಗಿದೆ. ಖಾಸಗೀ ಉದ್ಯಮಿಗಳೊಂದಿಗೆ ಇತ್ತೀಚೆಗೆ ಉತ್ತರ ಕನ್ನಡ ಜಿಲ್ಲೆಯ ಸಂಪೂರ್ಣ ಸರ್ವೆಯನ್ನು ಮಾಡಲಾಗಿದೆ ಮತ್ತು ಸಮುದ್ರ ತೀರದಲ್ಲಿ ಬೇಸಿಗೆಯ ತಾಣವನ್ನು ಮತ್ತು ಅರಣ್ಯ ಧಾಮವನ್ನು ಅರಣ್ಯ ಇಲಾಖೆಯ ಸಹಯೋಗದಿಂದ ಅಭಿವೃದ್ಧಿಪಡಿಸಲು ಯೋಜನೆ ಹಾಕಿಕೊಳ್ಳಲಾಗಿದೆ. ಈ ಅಭಿವೃದ್ಧಿ ನಿಗಮವು ಈಗಿರುವ ಬಸ್ಸುಗಳ ಜೊತೆಗೆ 5 ಸುವಿಹಾರಿ ಬಸ್ಸುಗಳನ್ನು ಮತ್ತು 3 ಹವಾ ನಿಯಂತ್ರಿತ ಬಸ್ಸುಗಳನ್ನು ಹೊಂದಲು ಸಹ ಯೋಜಿಸಲಾಗಿದೆ. ಮಯೂರ, ಹೊಯ್ಸಳ, ಮೈಸೂರಿನಲ್ಲಿ, 20 ಹೊಸ ಕೊಠಡಿಗಳನ್ನು ಮತ್ತು ಕೆ.ಆರ್. ಸಾಗರದಲ್ಲಿ 10ಹೆಚ್ಚಿನ ಕೊಠಡಿಗಳನ್ನು ರಾಜ್ಯ ಸರ್ಕಾರದ ಅನುದಾನದೊಂದಿಗೆ ಮತ್ತು ಮೇಲ್‌ಕಾಮನ ಹಳ್ಳಿಯಲ್ಲಿ 8 ಕೊಠಡಿಗಳನ್ನು ಹಾಗೂ ಬೆಳಗಾಂ ಘಟಕದಲ್ಲಿ ಕೇಂದ್ರ ಸರ್ಕಾರದ ಆರ್ಥಿಕ ಸಹಾಯದೊಂದಿಗೆ ಹೈವೇ ಸೌಲಭ್ಯಗಳನ್ನು ಒದಗಿಸುವ ಯೋಜನೆಗಳನ್ನು ಹಾಕಿಕೊಳ್ಳಲಾಗಿದೆ.

ಆ) ಹೌದು. ಈ ನಿಗಮವು ದೊಡ್ಡ ಆಲದ ಮರ, ಬನ್ನೇರುಘಟ್ಟ ಮತ್ತು ನಂದಿಬೆಟ್ಟ ಘಟಕಗಳನ್ನು ಅಭಿವೃದ್ಧಿಪಡಿಸಲು ಯೋಜನೆಗಳನ್ನು ಹಮ್ಮಿಕೊಂಡಿದೆ. ದೊಡ್ಡ ಆಲದ ಮರ ಘಟಕ, ಬನ್ನೇರು ಘಟ್ಟ ಘಟಕಗಳಲ್ಲಿ ಮಕ್ಕಳಿಗೆ ಮನರಂಜನಾ ಕ್ರೀಡೆಗಳಿಗೆ ಅವಕಾಶ ಮಾಡಿಕೊಡುವ ಯೋಜನೆಗಳನ್ನು ಸಹ ಹಮ್ಮಿಕೊಂಡಿದೆ. ಬನ್ನೇರುಘಟ್ಟ ಘಟಕಕ್ಕೆ ಈ ನಿಗಮವು ಸಂಬಂಧಿಸಿದ ಸೀಸನ್‌ಗಳಲ್ಲಿ ನಿಗಧಿತ ಪ್ರವಾಸಗಳ ವ್ಯವಸ್ಥೆಯನ್ನು ಮಾಡಿದೆ. ನಂದಿ ಬೆಟ್ಟದ ಘಟಕವು 2 ಕೊಠಡಿಗಳನ್ನು ಈಗ ಹೊಂದಿದ್ದು, 5 ಕೊಠಡಿಗಳನ್ನು ಕಟ್ಟಿಸಿ ಅಭಿವೃದ್ಧಿಪಡಿಸುವ ಯೋಜನೆಯನ್ನು ಹಮ್ಮಿಕೊಳ್ಳಲಾಗಿದೆ.

ಕೆ.ಎಂ.ಎಫ್ ವಿದೇಶದಿಂದ ಹೊಸತಳಿಗಳನ್ನು ಆಮದು ಮಾಡಿಕೊಂಡಿರುವುದು

712 - ಶ್ರೀ ಎನ್. ರಾಜಣ್ಣ (ಭಾರತೀನಗ) : ಮಾನ್ಯ ಪಶುಸಂಗೋಪನಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೆ.ಎಂ.ಎಫ್. ಹೊಸ ತಳಿಗಳನ್ನು ವಿದೇಶದಿಂದ ಆಮದು ಮಾಡಿಕೊಂಡಿದೆಯೇ?

ಆ) ಹಾಗಿದ್ದಲ್ಲಿ 1995ನೇ ಜನವರಿಯಿಂದ ಇಲ್ಲಿಯವರೆಗೆ ಯಾವ ಯಾವ ದೇಶಗಳಿಂದ ಎಷ್ಟು ತಳಿಗಳನ್ನು ಆಮದು ಮಾಡಿಕೊಳ್ಳಲಾಗಿದೆ?

ಇ) ಇದಕ್ಕಾಗಿ ಖರ್ಚು ಮಾಡಿದ ವೆಚ್ಚವೆಷ್ಟು?

ಶ್ರೀ ಬಿ.ಎನ್. ಬಚ್ಚೇಗೌಡ (ಪಶುಸಂಗೋಪನಾ ರಾಜ್ಯ ಸಚಿವರು) :

ಅ) ಹೌದು

ಆ) ಆಸ್ಟ್ರೇಲಿಯಾದಿಂದ 65 ಹೋರಿಗಳನ್ನು ಆಮದು ಮಾಡಿಕೊಳ್ಳಲಾಗಿದೆ.

ಅದರಲ್ಲಿ : 46 ಹೆಚ್.ಎಫ್. ತಳಿ

19 ಜರ್ಸಿ ತಳಿ

ಇ) ರೂ. 51,53,325-30

ಕಮಲಾಪುರ ವಿಧಾನಸಭಾ ಕ್ಷೇತ್ರದಲ್ಲಿ ಕುಡಿಯುವ ನೀರಿನ ಅಭಾವ

727 - ಶ್ರೀ ರೇವುನಾಯಕ ಬೆಳಮಗಿ (ಕಮಲಾಪುರ) : ಮಾನ್ಯ ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗುಲ್ಬರ್ಗಾ ಜಿಲ್ಲೆಯ ಕಮಲಾಪುರ ವಿಧಾನಸಭಾ ಕ್ಷೇತ್ರದಲ್ಲಿ ಕಳೆದ ಕೆಲವು ತಿಂಗಳುಗಳಿಂದ ಕುಡಿಯುವ ನೀರಿನ ಅಭಾವ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಆ ಬಗ್ಗೆ ಕೈಗೊಂಡ ಕ್ರಮವೇನು?

ಇ) ಕಮಲಾಪುರ ನರೋಣ ಈ ಎರಡು ಗ್ರಾಮಗಳಿಗೆ ವಿಶೇಷವಾಗಿ ಹೆಚ್ಚಿನ ಕುಡಿಯುವ ನೀರಿನ ತೊಂದರೆಯಾಗಿರುವುದು ನಿಜವೇ?

ಈ) ಹಾಗಿದ್ದಲ್ಲಿ ಈ ವಿಷಯದಲ್ಲಿ ಸರ್ಕಾರದವರು ಕೈಗೊಂಡ ಕ್ರಮವೇನು?

ಶ್ರೀ ಎಂ.ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಸಚಿವರು):

ಅ) ಬಂದಿದೆ

ಆ) 1995-96ರ ಕ್ರಿಯಾ ಯೋಜನೆಯಲ್ಲಿ ಆದ್ಯತೆ ಮೇಲೆ ಕೊಳವೆ ಬಾವಿ ತೊರೆಯಲು ಕ್ರಮ ಕೈಗೊಳ್ಳಲಾಗಿದೆ.

ಇ) ಕಮಲಾಪುರ ಮತ್ತು ನರೋಣ ಗ್ರಾಮಗಳ ಹೊಸ ಬಡಾವಣೆಗಳ ಕೆಲವು ಭಾಗಗಳಲ್ಲಿ ಸ್ವಲ್ಪ ಕುಡಿಯುವ ನೀರಿನ ತೊಂದರೆ ಇದೆ.

(ಈ)

1) **ಕಮಲಾಪುರ ಗ್ರಾಮ** : ಈ ವಿಷಯದಲ್ಲಿ ಉದ್ಯೋಗ ಭರವಸೆ ಯೋಜನೆಯ ಅಡಿಯಲ್ಲಿ ಕೆಲಸ ಮುಗಿದಿದ್ದು, ಮಾರ್ಚ್ ತಿಂಗಳ ಮಧ್ಯದವರೆಗೆ ಸಮಸ್ಯೆಯನ್ನು ಬಗೆಹರಿಸಲಾಗುವುದು.

2) **ನರೋಣಾ ಗ್ರಾಮ** : ಕೆಲವು ಬಡಾವಣೆಗಳಿಗೆ ಅಗತ್ಯಕ್ಕಿಂತ ಕಡಿಮೆ ಪ್ರಮಾಣದಲ್ಲಿ ನೀರು ಸರಬರಾಜು ಆಗುತ್ತಿದ್ದು ಸ್ವಲ್ಪಮಟ್ಟಿಗೆ ನೀರಿನ ಸಮಸ್ಯೆ ಇರುತ್ತದೆ. ಇದನ್ನು ಹೋಗಲಾಡಿಸಲು 1995-96ನೇ ಸಾಲಿನ ಉದ್ಯೋಗ ಭರವಸೆ ಯೋಜನೆಯಡಿಯಲ್ಲಿ (ಹೆಚ್ಚಿನ ಅನುದಾನದಲ್ಲಿ) ರೂ. 4.00 ಲಕ್ಷ ಕಾಯ್ದಿರಿಸಲಾಗಿದೆ. ಬೇಗನೆ ಕೆಲಸ ಮುಗಿಸಿ ನೀರು ಸರಬರಾಜು ಸಮಸ್ಯೆಯನ್ನು ಬಗೆಹರಿಸಲಾಗುವುದು.

ಕಮಲಾಪುರ ಕ್ಷೇತ್ರದಲ್ಲಿ ವಿದ್ಯುತ್ ಸರಬರಾಜು ಆಗದೆ ಇರುವ ಗ್ರಾಮಗಳು

726 - ಶ್ರೀ ರೇವುನಾಯಕ್ ಬೆಳಮಗಿ (ಕಮಲಾಪುರ) : ಮಾನ್ಯ ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಮಲಾಪುರದ ಮತ ಕ್ಷೇತ್ರದಲ್ಲಿ ವಿದ್ಯುತ್ ಸರಬರಾಜು ಎಷ್ಟು ತಾಂಡಾಗಳಿಗೆ ಸಂಪರ್ಕ ಸೌಲಭ್ಯ ಕಲ್ಪಿಸಲಾಗಿದೆ, ಇನ್ನುಳಿದ ತಾಂಡಾಗಳಿಗೆ ಯಾವಾಗ